

# ಕಠಿಣ ಶಿಕ್ಷೆ

■ ಸು. ವಿಜಯಲಕ್ಷ್ಮಿ, ಶಿವಮೊಗ್ಗ
ಕಲೆ: ಸಂತೋಷ್ ಸಸಿಹಿತ್ಲು

ರಮೇಶ ಸರ್ಕಾರಿ ಶಾಲೆಯಲ್ಲಿ ಮೂರನೆಯ ತರಗತಿ ಓದುತ್ತಿದ್ದನು. ಅವನ ಶಾಲೆಗೆ ಕಳೆದ ಎರಡು ದಿನಗಳ ಹಿಂದೆ ಅಷ್ಟೇ ಹೊಸ ಮೇಷ್ಟ್ರು ಬಂದಿದ್ದರು. ಅವರು ಹೋಂವರ್ಕ್ ಕೊಟ್ಟಿದ್ದರು. ಹೋಂವರ್ಕ್ ಮಾಡದೇ ಇದ್ದರೆ ಕಠಿಣವಾದ ಶಿಕ್ಷೆ ಕೊಡುವುದಾಗಿ ತಿಳಿಸಿದ್ದರು. ಅಂದು ಶುಕ್ರವಾರ. ಮಾರನೆ ದಿನ ಶನಿವಾರ ಬೆಳಗಿನ ತರಗತಿ. ರಮೇಶನ ತಂದೆ ಶುಕ್ರವಾರ ಸಂಜೆ ಆಫೀಸಿನಿಂದ ಬರುವಾಗ ಸ್ಕೂಟರ್‌ನಿಂದ ಬಿದ್ದಿದ್ದರು. ಯಾರೋ ಹತ್ತಿರದಲ್ಲಿದ್ದ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿ, ಅಲ್ಲಿಂದ ರಮೇಶನ ಮನೆಗೆ ಫೋನ್ ಮಾಡಿ ಅವನಮ್ಮನಿಗೆ ತಿಳಿಸಿದ್ದರು. ಅವರು ರಮೇಶನನ್ನು ಮತ್ತು ಅವನ ತಂಗಿಯನ್ನು ಆಟೊದಲ್ಲಿ ಬಲಗೈ ಮೂಳೆ ಮುರಿದಿರುವುದರಿಂದ, ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಬ್ಯಾಂಡೇಜ್ ಹಾಕಿದ್ದರು. ರಮೇಶನ ತಾಯಿ ಆಸ್ಪತ್ರೆಯಲ್ಲಿ ಅವನ ತಂದೆಗೆ ಎಕ್ಸ್ ರೇ ತೆಗೆಸಲು ಹೋದಾಗ, ಮಾತ್ರೆ, ನೀರು ಎಂದು ಹೊರಗೆ ಹೋದಾಗ ರಮೇಶನೇ ತಂಗಿಯನ್ನು ನೋಡಿಕೊಂಡಿದ್ದನು. ನಂತರ ಇಂಜೆಕ್ಷನ್, ಮಾತ್ರೆಗಳನ್ನು ತೆಗೆದುಕೊಂಡು ಎಲ್ಲರೂ ಮನೆಗೆ ಬರುವಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ನಂತರ ಅವನ ತಾಯಿ ಅಡುಗೆ ಕೆಲಸವೆಲ್ಲ ಮುಗಿಸುವವರೆಗೆ ಅವನೇ ತಂಗಿಯನ್ನು ನೋಡಿಕೊಳ್ಳಬೇಕಾಗಿತ್ತು. ಹಾಗಾಗಿ ಹೋಂವರ್ಕ್ ಮಾಡಲು ಸಾಧ್ಯವಾಗಿರಲಿಲ್ಲ. ಶನಿವಾರ ಬೆಳಗಿನ ತರಗತಿಗೆ ಹೋಂವರ್ಕ್ ಮಾಡದೆ ಬಂದಿದ್ದನು.

ರಮೇಶ ಹಿಂದಿನ ದಿನದ ಘಟನೆಯನ್ನು ತನ್ನ ಸ್ನೇಹಿತರಿಗೆ ಹೇಳಿದನು. ಆಗ ಅವನ ಸ್ನೇಹಿತರು 'ಏನೂ ಕಾರಣ ಹೇಳುವುದು ಬೇಡ. ಹೋಂ ವರ್ಕ್ ಮಾಡದಿದ್ದರೆ, ಮೇಷ್ಟ್ರು ಕಠಿಣ ಶಿಕ್ಷೆ ಕೊಡುತ್ತೀನಿ ಅಂತ ಹೇಳಿದ್ದರು. ನಿನಗೆ ಕಾದಿದೆ ನೋಡು' ಎಂದು ಒಬ್ಬೊಬ್ಬರು ಒಂದೊಂದು ರೀತಿ ಹೆದರಿಸಿದರು. ರಮೇಶನಿಗೆ ಅಳುವೇ ಬಂದಿತು. ಅಷ್ಟರಲ್ಲಿ ಶಾಲೆಯ ಬೆಲ್ ಆಯಿತು. ಎಲ್ಲರೂ ಪ್ರಾರ್ಥನೆ ಮುಗಿಸಿ ಕ್ಲಾಸಿಗೆ ಹೋದರು.

ಮೇಷ್ಟ್ರು ಕ್ಲಾಸಿನೊಳಗೆ ಬರುತ್ತಿದ್ದಂತೆ 'ಎಲ್ಲರೂ ಹೋಂವರ್ಕ್ ಮಾಡಿದ್ದೀರಾ?' ಎಂದು ಪ್ರಶ್ನಿಸಿದರು. ಕ್ಲಾಸಿನ ಲೀಡರ್ 'ಸಾರ್. ರಮೇಶ ಒಬ್ಬ ಮಾತ್ರ ಮಾಡಿಲ್ಲ ಸಾರ್' ಎಂದನು. ಆಗ ಮೇಷ್ಟ್ರು ರಮೇಶನನ್ನು ಕರೆದರು. ರಮೇಶ ಹೆದರುತ್ತಾ ಮೇಷ್ಟ್ರ ಬಳಿಗೆ ಹೋದನು. 'ಹೋಂವರ್ಕ್ ಯಾಕೆ ಮಾಡಿಲ್ಲ? ನಿಜ ಹೇಳು ನಾನು ಏನೂ ಮಾಡುವುದಿಲ್ಲ' ಎಂದರು. ರಮೇಶ ಹಿಂದಿನ ದಿನ ಸಂಜೆ ತನ್ನ ತಂದೆಗೆ ಅಪಘಾತವಾಗಿ ಕೈ ಮೂಳೆ ಮುರಿದಿದ್ದರಿಂದ ಆಸ್ಪತ್ರೆಗೆ ಹೋಗಿದ್ದು, ತಾನು ಎರಡು ದಿನ ತನ್ನ ತಂಗಿಯನ್ನು ನೋಡಿಕೊಂಡಿದ್ದು ಎಲ್ಲವನ್ನೂ ಮೇಷ್ಟ್ರಿಗೆ ಅಳುತ್ತಲೇ ಹೇಳಿದನು ಹಾಗೂ ಅವನು ಜೇಬಿನಿಂದ ಅವನ ತಾಯಿ ಕೊಟ್ಟ ಪತ್ರವನ್ನು ಮೇಷ್ಟ್ರಿಗೆ ಕೊಟ್ಟನು. ರಮೇಶನ ತಾಯಿ ತಮ್ಮ ಮಗ ಹೋಂವರ್ಕ್ ಮಾಡದೇ ಇದ್ದುದ್ದಕ್ಕೆ ಕಾರಣ ಕೊಟ್ಟು, ರಮೇಶನು ಮರುದಿನ ಹೋಂವರ್ಕ್ ಮಾಡಿಕೊಂಡು ಬರುತ್ತಾನೆಂದು ತಿಳಿಸಿದ್ದರು. ರಮೇಶ ಮೇಷ್ಟ್ರ ಮುಖವನ್ನೇ ನೋಡುತ್ತಿದ್ದನು. 'ಮೇಷ್ಟ್ರು ಅವನನ್ನು ಎತ್ತಿ ಟೇಬಲ್ ಮೇಲೆ ನಿಲ್ಲಿಸಿದರು. ಎಲ್ಲ ಹುಡುಗರೂ ಗಾಬರಿಯಿಂದ ನಿಶ್ಯಬ್ದವಾಗಿ ನೋಡುತ್ತಿದ್ದರು. 'ನೋಡಿ, ಈ ರಮೇಶ, ನಿಮ್ಮ ಗೆಳೆಯ ತನ್ನ ತಂದೆಗೆ ಅಪಘಾತವಾಗಿದ್ದಕ್ಕೆ ತಾಯಿಯ ಜೊತೆ ಆಸ್ಪತ್ರೆಗೆ ಹೋಗಿ, ಅಲ್ಲಿ ಅವನ ತಾಯಿಯು ತಂದೆಯ ಜೊತೆಯಿದ್ದರೆ, ಎರಡು ವರ್ಷದ ತಂಗಿಯನ್ನು ನೋಡಿಕೊಂಡಿದ್ದಾನೆ. ಈ ಬಗ್ಗೆ ಅವನ ತಾಯಿಯ ಹತ್ತಿರ ಪತ್ರ ಬರೆಸಿಕೊಂಡು ಬಂದಿದ್ದಾನೆ. ಮಕ್ಕಳೇ, ಮೊದಲು ನಮ್ಮ ಮನೆಯವರೆಲ್ಲ ಚೆನ್ನಾಗಿರಬೇಕು. ನಾವು ಕುಟುಂಬಕ್ಕೆ ಸಹಾಯಕರಾಗಿರಬೇಕು. ಆಮೇಲೆ ಓದುವುದು, ಬರೆಯುವುದು ಎಲ್ಲಾ, ಆಯಿತಾ? ಈಗ ಎಲ್ಲರೂ ನಿಮ್ಮ ಗೆಳೆಯ ರಮೇಶನಿಗೆ ಚಪ್ಪಾಳೆ ತಟ್ಟಿ' ಎಂದಾಗ ಮಕ್ಕಳೆಲ್ಲ ಚಪ್ಪಾಳೆ ತಟ್ಟಿದರು. ಮೇಷ್ಟ್ರು ರಮೇಶನನ್ನು ಟೇಬಲ್ ಮೇಲಿನಿಂದ ಇಳಿಸಿದರು. ಹುಡುಗರಿಗೆ ಮೇಷ್ಟ್ರ ಬಗ್ಗೆ ಇದ್ದ ವಿನಾಕಾರಣ ಭಯ ಮಾಯ. ■